**ಶ್ರೀ ಸತ್ಯನಿಧಿ ತೀರ್ಥರು - ಕರ್ನೂಲು**

**ಇಂದು ಆರಾಧಿತರಾದ ಗುರುಚರಣಗಳಿಗಿದೋ ವಚನ ಕುಸುಮ ಸಮರ್ಪಣೆ.**

**ಅನಧೀತ್ಯಮಹಾಭಾಷ್ಯಂ ವ್ಯಾಖ್ಯಾತಂ ಯದನುಗ್ರಹಾತ್**

**ವಂದೇ ತಂ ವಿಧಿನಾ ಸತ್ಯ-**

**-ನಿಧಿಂ ಸಜ್ಞಾನಸಿದ್ಧಯೇ ||**

ನಿವೃತ್ತಿ ಸಂಗಮ - ತುಂಗಾಭದ್ರ ಮತ್ತು ಕೃಷ್ಣಾ ನದಿಗಳ ಸಂಗಮ ಸ್ಥಳದಲ್ಲಿ ವಿರಾಜಮಾನರಾಗಿದ್ದು, ಶ್ರೀಮದುತ್ತರಾದಿ ಮಠದ ವಿಶ್ವಗುರು ಶ್ರೀ ಮಧ್ವಾಚಾರ್ಯರಿಂದ ಹತ್ತೊಂಬತ್ತನೇ ಯತಿಗಳಾಗಿ ಬಂದು ಶ್ರೀ ವಿಷ್ಣು ಸಹಸ್ರನಾಮಕ್ಕೆ ವ್ಯಾಖ್ಯಾನ ಬರೆದ ಮಹನೀಯರು ಶ್ರೀ ಸತ್ಯನಿಧಿ ತೀರ್ಥರು.

**ಪೂರ್ವಾಶ್ರಮನಾಮ : ಶ್ರೀ ಕೌಲಿಗಿ ರಘುಪತ್ಯಾಚಾರ್ಯರು**

**ವೇದಾಂತ ಸಾಮ್ರಾಜ್ಯ ಕಾಲ : 1638 ರಿಂದ 1660**

**ಆಶ್ರಮ ಗುರುಗಳು : ಶ್ರೀ ಸತ್ಯವ್ರತ ತೀರ್ಥರು (ಸಾಂಗಲಿ)**

**ಆಶ್ರಮ ಶಿಷ್ಯರು : ಶ್ರೀ ಸತ್ಯನಾಥ ತೀರ್ಥರು (ವೀರಚೋಳಪುರಂ )**

**ಆರಾಧನಾ ದಿವಸ : ಮಾರ್ಗಶೀರ್ಷ ಶುದ್ಧ ದಶಮಿ**

ಬೃಂದಾವನ : ನಿವೃತ್ತಿ ಸಂಗಮ ಆದರೆ ಈಗ ಬೃಂದಾವನ ಸ್ಥಳಾಂತರಗೊಂಡು ಕರ್ನೂಲು ಉತ್ತರಾದಿ ಮಠದಲ್ಲಿದೆ.

ಶ್ರೀ ಸತ್ಯವ್ರತ ತೀರ್ಥರ ಶಿಷ್ಯರು, ಶ್ರೀ ಸತ್ಯನಾಥ ತೀರ್ಥರ ಗುರುಗಳು, ಮಹಾತಪಸ್ವಿಗಳು ಶ್ರೀ ಸತ್ಯನಿಧಿ ತೀರ್ಥರು.

" ನಿಧೀಯತೇ ಅತ್ರ ನಿಧಿಃ " ಎಂಬಂತೆ ಏನನ್ನು ಮಾಡಿದರು ಅದಕ್ಕೆ ಫಲಕೊಡುವವನು ದೇವರ ಮೂಲಕ ತಮ್ಮನ್ನು ನಂಬಿದವರಿಗೆ ಫಲಕೊಡಿಸುವವರು ಶ್ರೀ ಸತ್ಯನಿಧಿಗಳು ಎಂದು ಅನೇಕ ಪ್ರಾಜ್ಞರು ಕೊಂಡಾಡಿದ್ದಾರೆ.

ಸಕಲಶಾಸ್ತ್ರಗಳಲ್ಲಿ ಪೂರ್ವಾಶ್ರಮದಲ್ಲೇ ಅಪಾರ ಪಾಂಡಿತ್ಯ ಹೊಂದಿದ್ದ ಶ್ರೀ ರಘುಪತ್ಯಾಚಾರ್ಯರು ವಾಕ್ಯಾರ್ಥಚಂದ್ರಿಕಾಚಾರ್ಯರೆಂದೇ ಪ್ರಸಿದ್ಧರಾಗಿದ್ದ ಶ್ರೀ ವಿದ್ಯಾಧೀಶ ತೀರ್ಥರ ಅನುಗ್ರಹದಿಂದ ಜನ್ಮ ತಾಳಿದವರು. ಪುಣ್ಯಸ್ತಂಭ ಅಥವಾ ಈಗಿನ ಪೂಣೆಯಲ್ಲಿ ಇವರ ತಂದೆತಾಯಿಗಳಾದ ಶ್ರೀ ಪುರುಷೋತ್ತಮಾಚಾರ್ಯರು ಮತ್ತು ಶ್ರೀ ಸತ್ಯದೇವಿಯವರು ವಾಸಿಸುತ್ತಿದ್ದರು, ದೇವಪೂಜೆ, ಶಾಸ್ತ್ರಾಧ್ಯಯನ, ಪಾಠ ಪ್ರವಚನಗಳಲ್ಲಿ ನಿರತರಾಗಿದ್ದರು. ಇವರ ತಂದೆತಾಯಿಗಳಿಗೆ ಶ್ರೀವಿದ್ಯಾಧೀಶ ತೀರ್ಥರು ಕನಸಿನಲ್ಲಿ ದರ್ಶನ ಕೊಟ್ಟು ಮುಂದೆ ಈ ಪೀಠವನ್ನು ಆಳುವ ಒಬ್ಬ ಸತ್ಪುತ್ರ ಜನಿಸುತ್ತಾನೆ ಎಂದು ಆಶೀರ್ವಾದ ಮಾಡಿದ್ದರು. ಕೆಲವರು ಇವರು ಪಾಂಡುರಂಗಿ ಮನೆತನಕ್ಕೆ ಸೇರಿದವರು ಎಂದು ಹೇಳುತ್ತಾರೆ. ವಿದ್ಯಾಧೀಶರ ಅನುಗ್ರಹದಿಂದ ಜನಿಸಿದ ಈ ಮಗುವಿಗೆ ಗುರುಗಳಾದ ಶ್ರೀ ರಘೂತ್ತಮ ತೀರ್ಥರ ಹೆಸರನ್ನು

ರಘುನಾಥ ಅಥವಾ ರಘುಪಥ್ಯಚಾರ್ಯ ಎಂದು ಇಡಲಾಗಿತ್ತು. ಅಪಾರ ಪಾಂಡಿತ್ಯ ಮತ್ತು ವಿದ್ವತ್ತುಗಳಿಂದ ಕೂಡಿದ ರಘುನಾಥಾಚಾರ್ಯರಿಗೆ ಶ್ರೀ ಸತ್ಯವ್ರತ ತೀರ್ಥರು ತಮ್ಮಗುರುಗಳಾದ ಶ್ರೀವೇದನಿಧಿ ತೀರ್ಥರ ಆಶಯ ಮತ್ತು ಆದೇಶದಂತೆ ಸರ್ವಜ್ಞ ಪೀಠವನ್ನು ಬಹುಧಾನ್ಯ ಸಂವತ್ಸರ ಫಾಲ್ಗುಣ ಶುದ್ದ ಷಷ್ಠಿಯಂದು ಆಶ್ರಮವನ್ನು ಕೊಟ್ಟು ಶ್ರೀ ಸತ್ಯನಿಧಿತೀರ್ಥರು ಎಂದು ಹೆಸರಿಸಿದರು. ಮುಂದೆ ಸಾಂಗಲಿಯಲ್ಲಿ ಶ್ರೀ ಸತ್ಯವ್ರತ ತೀರ್ಥರು ಸಶರೀರರಾಗಿ ವೃಂದಾವಸ್ಥರಾದರು.

ಶ್ರೀ ಸತ್ಯನಿಧಿ ತೀರ್ಥರು ತಮ್ಮ ಗುರುಗಳ ವೃಂದಾವನ ಕಟ್ಟಿಸಿ ಮಹಾಸಮಾರಾಧನೆಯನ್ನು ಬಹು ವಿಜೃಂಭಣೆಯಿಂದ ಮಾಡಿ ವಿಪ್ರಶ್ರೇಷ್ಠರಿಗೆ ಹಿಂದೆದೂ ಕೇಳಿರದ ಹಾಗೆ ದಕ್ಷಿಣೆಗಳನ್ನೂ ಕೊಟ್ಟು ಅಲ್ಲಿದ್ದ ಎಲ್ಲ ಪಂಡಿತರಿಗೆ ವಿದ್ಯಾದಾನ ಮಾಡಲು ಆದೇಶಿಸಿ ಮುಂದೆ ಮಧ್ವಸಿದ್ಧಾಂತದ ಪ್ರಚಾರಕ್ಕೆ ತೆರಳಿದರು.

ವಿಪಕ್ಷ ವಿದ್ವಾಂಸರನ್ನು ಸೋಲಿಸಿದ ವರ್ಣನೆಯನ್ನು ನಾವು ವಿಸ್ತಾರವಾಗಿ " ಶ್ರೀ ಸತ್ಯನಿಧಿ ವಿಲಾಸ" ಎಂಬ ಗುರುಗಳ ಕುರಿತಾದ ಗ್ರಂಥದಲ್ಲಿ ನೋಡಬಹುದು. ಸರ್ಪಗಳು ಹೇಗೆ ಮಯೂರ ಅಥವಾ ಗರುಡನ ಝೇಂಕಾರದಲ್ಲಿ ವಿಲೀನವಾಗುವಂತೆ ಎಲ್ಲ ಮಾಯಿಗಳು ಇವರ ಮಧ್ವಸಿದ್ಧಾಂತದ ಝೇಂಕಾರಕ್ಕೆ ವಿಲೀನರಾದರು. ನ್ಯಾಯ ಸಮ್ಮತವಾದ ಶಾಸ್ತ್ರೀಯ ವಿಷಯಗಳನ್ನು ಮಂಡಿಸುವಲ್ಲಿ ಇವರು ನಿಪುಣರು. ಇವರ ವಿದ್ವತ್ ಕೌಶಲ್ಯಕ್ಕೆ ಮರುಳಾಗಿ ರಾಘವ ಪಂಡಿತನೆಂಬ ರಾಜನು ಇವರು ಬರುವ ಸುದ್ದಿಯನ್ನು ತಿಳಿದು, ತಳಿರು ತೋರಣಗಳಿಂದ ಶೃಂಗರಿಸಿ ಇವರನ್ನು ಬರಮಾಡಿಕೊಂಡು ಚಾತುರ್ಮಾಸವನ್ನು ತನ್ನ ಅರಮನೆಯಲ್ಲೇ ನೆರವೇರಿಸುವಂತೆ ಕೋರಿಕೊಂಡನು.

ಕಂಚಿ, ತಂಜಾವೂರು, ಮಧುರೆಗಳಲ್ಲಿ ವಾಕ್ಯಾರ್ಥಮಾಡಿ ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿದರು. ಕುಂಭಕೋಣದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳನ್ನು ಭೇಟಿಯಾಗಿ ಉಭಯತ್ರಯರು ಒಟ್ಟಿಗೆ ಪೂಜಾದಿಗಳನ್ನು ಮಾಡಿ ಪರಸ್ಪರ ಒಬ್ಬರನ್ನೊಬ್ಬರು ಸನ್ಮಾನಿಸಿದರು. ಅಲ್ಲಿಂದ ಮುಂದೆ ಬೀಜಾಪುರಕ್ಕೆ ಹೋದರು ಅಲ್ಲಿ ಅನಂತ ಪ್ರಭು ಎಂಬ ಧಾರ್ಮಿಕ ಮುಖಂಡನು ಇವರನ್ನು ಬಹುವೈಭವದಿಂದ ಬರಮಾಡಿಕೊಂಡನು. ಅಲ್ಲಿ ಮುದ್ರಾಧಾರಣೆ ಭಿಕ್ಷೆಗಳನ್ನೂ ಸ್ವೀಕರಿಸಿ ತರುವಾಯ ತಿರುಪತಿಗೆ ಬಂದರು. ಅಲ್ಲಿ ವೆಂಕಟೇಶದೇವರನ್ನು ದರ್ಶಿಸಿ ಮುಂದೆ ಕಂಚಿಗೆ ಹೋದರು, ಮೊದಲಿನಿಂದಲೂ ಕಂಚಿಯಲ್ಲಿ ವಿದ್ವಾಂಸರ ದಂಡೇ ಅಲ್ಲಿರುವುದು ಅವರೊಡನೆ ವಾಕ್ಯಾರ್ಥ ಮಾಡಿ ಗೆದ್ದು ಅಲ್ಲಿ ವರದರಾಜ ಆಲಯದಲ್ಲಿ ಗೌರವವನ್ನು ಪಡೆದು ಏಕಾಂಬರೇಶ್ವರನ ದರ್ಶನ ಪಡೆದರು, ಕ್ಷೇತ್ರದೇವತೆಯಾದ ಕಾಮಾಕ್ಷಿ ದೇವಿಯದರ್ಶನ ಪಡೆದು ಅಲ್ಲಿಯ ಬಿಡಾರದಲ್ಲಿ ಕುಳಿತಿದ್ದಾಗ ಅಲ್ಲಿಗೆ ಚಂಜಿನಗರದ ರಾಜ ಅನಂತ ವಿಭು ಎಂಬುವನು ಬಂದನು. ಶುದ್ಧ ಅದ್ವೈತಿಯಾದ ರಾಜ ಕೇವಲ ಇವರ ಮುಖದರ್ಶನ ದಿಂದ ಪುಳಕಿತರಾಗಿ ತಾನಾಗಿಯೇ ದ್ವೈತದಲ್ಲಿದ್ದ ಸಂದೇಹಗಳನ್ನು ನಿವಾರಿಸಿ ಎಂದು ಇವರಲ್ಲಿ ಕೇಳಿಕೊಂಡನು. ಅವನ ಸಂಶಯಗಳನ್ನು ಪರಿಹರಿಸಿದ ಶ್ರೀ ಸತ್ಯನಿಧಿ ತೀರ್ಥರು ಅವನಿಗೆ ಮುಂದೆ ನೀನು ಈ ಮಹಾಸಾಮ್ರಾಜ್ಯದ ಅಧಿಪತಿ ಯಾಗು ಎಂದು ಆಶೀರ್ವದಿಸಿದರು. ಅವರಿಗಾಗಿ ತಿಂತ್ರಿಣಿ ನದಿ ದಂಡೆಯಲ್ಲಿ ಒಂದು ಮಠವನ್ನು ಕಟ್ಟಿಸಿಕೊಟ್ಟನು ಅಲ್ಲೇ ಸ್ವಲ್ಪದಿನಗಳು ಶ್ರೀಸತ್ಯನಿಧಿ ತೀರ್ಥರು ತಂಗಿದ್ದರು.

ಸತ್ಯನಿಧಿ ತೀರ್ಥರ ವೈರಾಗ್ಯ

೧. ಶ್ರೀರಾಮಚಂದ್ರನಲ್ಲಿ ಭಕ್ತಿಯ ಮದುಕರವೃತ್ತಿ ಹೊರತು ತಮಗಾಗಿ ಮದುಕರವೃತ್ತಿ ಮಾಡಿದವರಲ್ಲ

೨. ಮೂಲರಾಮ ಪೂಜೆ ಮುಗಿದು ಶಾಸ್ತ್ರಾಧ್ಯಯನವಾದ ನಂತರವೇ ಭಿಕ್ಷೆ ಸ್ವೀಕಾರ ಅದು ರಾತ್ರಿಯೇ ಆಗುತ್ತಿತ್ತು.

೩. ತನ್ಮಯತೆಯಲ್ಲಿ ರಾಮನ ಪೂಜೆಯ ನಂತರ ಬಾಹ್ಯ ಪ್ರಪಂಚದ ಒಡನಾಟ

೪. ಯಾವತ್ತೂ ತಮಗಾಗಿ ಛತ್ರ ಚಾಮರ ಗೌರವಗಳನ್ನು ತೆಗೆದು ಕೊಂಡವರಲ್ಲ.

೫. ಮೂಲರಾಮನ ಪೂಜೆಯೊಂದೇ ಗುಡಿಸಿಲಿನಲ್ಲೂ ಅರಮನೆಯಲ್ಲೂ ಒಂದೇ ವೈಭವ ಹಾಕಿಕೊಟ್ಟವರು

೬. ಸದಾ ರಾಮದೇವರ ಚಿಂತನೆ, ಪ್ರತಿಯೊಬ್ಬರಲ್ಲೂ ರಾಮನ ಆದರ್ಶ ಕಂಡವರು.

೭ ನಿಶ್ಚಲವಾದ ಭಕ್ತಿ

೮ . ಆಹ್ನೀಕಕ್ಕೆ ಕುಳಿತರೆ ಸಮಯದ ಅರಿವೇ ಇರುತ್ತಿರಲಿಲ್ಲ.

ಮುಂದೆ ಶ್ರೀಮುಷ್ಣ, ಶ್ರೀರಂಗ, ವೃಷಭಾದ್ರಿ, ಮಧುರೆ ಮೀನಾಕ್ಷಿ ಮತ್ತು ಸುಂದರರಾಜರ ದರ್ಶನ, ರಾಮಸೇತು ಸ್ನಾನ, ತಾಮ್ರಪರ್ಣಿ, ಅನಂತಶಯನ, ದರ್ಶನ. ಗೋಕರ್ಣ ಮತ್ತು ಉಡುಪಿಕ್ಷೇತ್ರಗಳಲ್ಲಿ ಸ್ವಲ್ಪಕಾಲ ವಾಸ. ಅಲ್ಲಿಂದ ತಮ್ಮ ಕುಲದೈವ ಪಾಂಡುರಂಗ ವಿಠಲನ ದರ್ಶನ, ತಮ್ಮ ಗುರುಗಳ ಗುರುಗಳಾದ ವೇದನಿಧಿ ತೀರ್ಥರ ದರ್ಶನ, ಹಾಗೆ ವಿದ್ಯಾನಿಧಿತೀರ್ಥರು, ಅಕ್ಷೋಭ್ಯ ಮತ್ತು ಶ್ರೀ ಜಯತೀರ್ಥರ ದರ್ಶನ ಮಳಖೇಡದಲ್ಲಿ ಮುಗಿಸಿ ಸುಧಾಮಂಗಳ ಮಾಡಿದರು.

ಶ್ರೀ ರಂಗನಾಥ ತೀರ್ಥರು - ಸತ್ಯನಾಥ ತೀರ್ಥರಾದದ್ದು

ಶ್ರೀ ಸತ್ಯನಿಧಿ ತೀರ್ಥರು ಇಬ್ಬರು ಶಿಷ್ಯರಿಗೆ ಆಶ್ರಮ ಕೊಟ್ಟರು, ಅವರು ಶ್ರೀ ಸತ್ಯಾನಂದ ತೀರ್ಥರು ಮತ್ತು ಶ್ರೀ ಗುಣನಿಧಿ ತೀರ್ಥರು. ಅಲ್ಲಿಂದ ಮುಂದೆ ಶ್ರೀರಂಗಂ ಗೆ ಬಂದಾಗ ಅಲ್ಲಿ ಒಂದು ವಿದ್ವತ್ಸಭೆ ನಡೆಯುತ್ತಿತ್ತು. ಅಲ್ಲಿ ಒಬ್ಬ ಯತಿಗಳು ಶ್ರೀ ರಂಗನಾಥ ತೀರ್ಥರು ಅಪಾರ ಪಾಂಡಿತ್ಯವನ್ನು ಪ್ರದರ್ಶಿಸುತ್ತಿದ್ದರು. ಇವರ ಆಳವಾದ ವಿಚಾರ ಪ್ರತಿಪಾದನೆಯನ್ನು ನೋಡಿದ ಶ್ರೀ ಸತ್ಯನಿಧಿ ತೀರ್ಥರಿಗೆ ಬಹಳ ಮೆಚ್ಚುಗೆಯಾಯಿತು. ಇವರ ಬಗ್ಗೆ ವಿಚಾರಿಸಿದ ಸತ್ಯನಿಧಿ ತೀರ್ಥರು ತಮ್ಮ ಪೂರ್ವಿಕ ಗುರುಗಳಾದ ವಿದ್ಯಾನಿಧಿ ತೀರ್ಥರಿಂದ ಬಹಳ ಸಣ್ಣವಯಸ್ಸಿನಲ್ಲೇ ಸನ್ಯಾಸ ಸ್ವೀಕರಿಸಿದ್ದ ಮಹನೀಯರು ಮತ್ತು ತಮಗಿಂತ ಆಶ್ರಮ ಜೇಷ್ಠರು ಎಂದು ತಿಳಿಯಿತು. ಇವರೇ ತಮ್ಮ ಮುಂದಿನ ಉತ್ತರಾಧಿಕಾರಿಯೆಂದು ತಿಳಿದು ಅವರಿಗೆ ದಂಡ ವ್ಯತ್ಯಾಸ ಮಾಡಿ ಅವರಿಗೆ ಶ್ರೀ ಸತ್ಯನಾಥ ತೀರ್ಥರು ಎಂದು ಆಶ್ರಮ ನಾಮ ಕೊಟ್ಟರು. ಮುಂದೆ 14 ವರ್ಷಗಳ ಕಾಲ ಇವರಿಗೆ ಶಾಸ್ತ್ರಾಧ್ಯಯನ ಮಾಡಿಸಿದರು.

ನಿವೃತ್ತಿ ಸಂಗಮದಲ್ಲಿ ವಾಸ ಮಾಡುತ್ತಿರುವಾಗ ಅಲ್ಲಿಯ ರಾಜನು ಶತ್ರುಗಳಿಂದ ತನ್ನನ್ನು ಕಾಪಾಡುವಂತೆ ಬೇಡಿದಾಗ ಅವನಿಗೆ ಈ ಮಂತ್ರಾಕ್ಷತೆ ತೆಗೆದುಕೊಂಡು ಹೋಗು. ನಿನಗೆ ಶ್ರೇಯಸ್ಸಾಗುವುದೆಂದು ಹರಸಿ ಕಳುಹಿದರು. ವೈಶಾಖದ ಆ ಸಮಯದಲ್ಲಿ ಯುದ್ಧ ಪಿಪಾಸುಗಳಾಗಿ ಬಂದಿದ್ದ ಶತ್ರುಗಳು ಬೆಳಗಾದ ಕೂಡಲೇ ಯುದ್ಧಮಾಡಬೇಕೆಂದು ತೀರ್ಮಾನಿಸಿ ನದೀ ದಂಡೆ ನೀರಿಲ್ಲದೇ ಒಣಗಿ ಖಾಲಿಯಾಗಿರುವ ಕಾರಣ ವಿಸ್ತಾರವಾದ ಮರಳಿನಲ್ಲಿ ವಿಶ್ರಾಂತಿಗಾಗಿ ಮಲಗಿರಲು ಅಚಾನಕ್ಕಾಗಿ ಬಂದ ಪ್ರವಾಹಕ್ಕೆ ಬಹುತೇಕರು ಕೊಚ್ಚಿಕೊಂಡು ಹೋದರು. ಆಗ ಯುದ್ಧಕ್ಕೆ ಬಂದ ರಾಜನು ಇವರಿಗೆ ದೈವ ರಕ್ಷಣೆ ಇರುವುದೆಂದು ಭಾವಿಸಿ ಮರಳಿ ಹೋದವನು ಮುಂದೆಂದೂ ಈ ಕಡೆ ಯುದ್ಧದ ಆಲೋಚನೆಯನ್ನೂ ಮಾಡಲಿಲ್ಲ.

ಈ ವಿಚಾರ ತಿಳಿದು ಸಂತುಷ್ಟನಾದ ರಾಜನು ಗುರುಗಳೇ ತಮಗೇನು ಬೇಕು ಕೇಳಿ, ಎಂದಾಗ ಪಾಂಡವರಿಂದ ಪ್ರತಿಷ್ಠಿತವಾದ ಶಿವಲಿಂಗವೂ,ವಸಿಷ್ಠರಿಂದ ಸ್ಥಾಪಿತವಾದ ಲಕ್ಷ್ಮೀನರಸಿಂಹ ದೇವರ ಸನ್ನಿಧಾನವಿರುವ ಇಲ್ಲೇ ತಾವು ವೃಂದಾವನಸ್ಥರಾಗಲು ಬಯಸಿದ್ದೇವೆ ಎಂದರು. ಆಗ ಆ ರಾಜನು ಗುರುಗಳಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನೂ ಮಾಡಿದನು.

ಮುದ್ಗಲಾಚಾರ್ಯರ ವಂಶಕ್ಕೆ ನವರತ್ನ ಎಂಬ ಹೆಸರು ದಯಪಾಲಿಸಿದರು, ಈ ವಂಶದಲ್ಲೇ ಮುಂದೆ ಮೂರು ಜನ ಮಹನೀಯರು ಇವರ ಅನುಗ್ರಹದಿಂದ ಜನಿಸಿದರು ಅವರೇ ಶ್ರೀ ಸತ್ಯಧರ್ಮ ತೀರ್ಥರು, ಶ್ರೀ ಸತ್ಯಸಂಕಲ್ಪರು ಮತ್ತು ಶ್ರೀ ಸತ್ಯ ಸಂತುಷ್ಟ ತೀರ್ಥರು.

ಶ್ರೀ ಸತ್ಯನಿಧಿ ತೀರ್ಥರು 21 ವರ್ಷ 9 ತಿಂಗಳು ಮತ್ತು 4 ದಿವಸಗಳ ಕಾಲ ಉತ್ತರಾದಿಮಠದ ಪೀಠದಲ್ಲಿ ಕುಳಿತು ವೇದಾಂತ ಸಾಮ್ರಾಜ್ಯ ಆಳಿದರು. ಇವರು " ಜಾಬಾಲಿ ಋಷಿಗಳ ಅಂಶ " ಎಂದು ಪ್ರಸಿದ್ದರಾಗಿದ್ದಾರೆ. ಶ್ರೀಮದಾಚಾರ್ಯರಲ್ಲಿ ಅತೀವಭಕ್ತಿ ಹೊಂದಿದ್ದ ಶ್ರೀ ಸತ್ಯನಿಧಿ ತೀರ್ಥರು ಕರ್ನೂಲುನಲ್ಲಿ ಮತ್ತು ತುಮಕೂರಿನ ಆಚಾರ್ಯರ ಬೀದಿಯಲ್ಲಿ ಎರಡು ವಿಶೇಷವಾದ ಮುಖ್ಯಪ್ರಾಣ ವಿಗ್ರಹ ಪ್ರತಿಷ್ಠೆ ಮಾಡಿದ್ದಾರೆ.

ಮೊದಲೇ ಶಿಲ್ಪಶಾಸ್ತ್ರದಲ್ಲಿ ವಿಶೇಷ ಪರಿಣತಿ ಹೊಂದಿದ್ದ ಗುರುಗಳು ತಮ್ಮ ವೃಂದಾವನವನ್ನು ತಾವೇ ಸಿದ್ದಪಡಿಸಿಕೊಂಡಿದ್ದು ಅದರಲ್ಲಿ ಕೇಶವಾದಿ ಚತುರ್ವಿಂಶತಿ ಮೂರ್ತಿಗಳನ್ನೂ, ಸ್ವತಃ ಕಾಮಧೇನುವಾದ ಅವರು ಕಾಮಧೇನುವಿನ ಚಿತ್ರ ಅದರ ಕೆಳಗೆ ತಮ್ಮ ಚಿತ್ರವನ್ನು ಕೆತ್ತಿಸಿ ಇಟ್ಟಿದ್ದರು. 1660 ನೇ ಇಸವಿ ಶಾರ್ವರಿ ನಾಮ ಸಂವತ್ಸರ ಮಾರ್ಗಶೀರ್ಷ ಶುದ್ದ ದಶಮಿ ದಿನ ನಿವೃತ್ತಿ ಸಂಗಮ ಕೃಷ್ಣ ಮತ್ತು ತುಂಗಭದ್ರಾ ಸಂಗಮದಲ್ಲಿ ಹರಿಪಾದವನ್ನು ಸೇರಿದರು.ಇದೂ ಶಾರ್ವರೀ ಸಂವತ್ಸರವೇ ಅಲ್ಲವೇ.

ಇವರ ಬೃಂದಾವನ ಮೊದಲು ನಿವೃತ್ತಿ ಸಂಗಮದಲ್ಲಿ ಇತ್ತು, ಆದರೆ ಶ್ರೀಶೈಲಂ ವಿದ್ಯುತ್ ಉತ್ಪಾದನಾ ಘಟಕ ನಿರ್ಮಾಣ ವಾದ್ದರಿಂದ ಅಲ್ಲಿದ್ದ ಜಮೀನು ಹಳ್ಳಿಗಳು ಎಲ್ಲವು ಮುಳುಗಡೆ ಆಗುವದು ಎಂದು ಅಂದ್ರಸರ್ಕಾರ ಘೋಷಿಸಿದಾಗ ಶ್ರೀ ಸತ್ಯಪ್ರಮೋದ ತೀರ್ಥರು 1979 ರಲ್ಲಿ ಶ್ರೀ ಸತ್ಯನಿಧಿತೀರ್ಥರ ಬೃಂದಾವನವನ್ನು ಹಾಗೂ ಸಂಬಂದಿಸಿದ ಕಲ್ಲಿನ ಮಂಟಪ ಎಲ್ಲವನ್ನು ಜೋಪಾನವಾಗಿ ತೆಗೆಸಿ ಕಾಲ್ನಡಿಗೆಯಲ್ಲಿ ಕರ್ನೂಲಿನ ಉತ್ತರಾದಿ ಮಠಕ್ಕೆ ತೆಗೆದುಕೊಂಡು ಹೋಗಿ ಮೊದಲಿನಂತೆ ಜೋಡಿಸಿ ಪುನರ್ ನಿರ್ಮಾಣ ಮಾಡಿದರು. ಶ್ರೀಗಳ ವೃಂದಾವನ ತೆಗೆದಾಗ, ಶ್ರೀ ಸತ್ಯನಿಧಿತೀರ್ಥರ ಕುತ್ತಿಗೆಯ ಮೂಳೆ ಮತ್ತು ಅಸ್ತಿಗಳು, ಲೋಹದ ಕಮಂಡಲ, ಕಮಂಡದಲ್ಲಿ ಬತ್ತದ ತೀರ್ಥ, ಮುದ್ರೆಗಳು, ಗೋಪಿಚಂದನ ಮತ್ತು ಸಾಲಿಗ್ರಾಮಗಳನ್ನು ಒಳಗೊಂಡ ತಾಮ್ರದ ಸಂಪುಟ ಇವೆಲ್ಲವನ್ನೂ ತೆಗೆದುಕೊಂಡು ಕಲಾಕರ್ಷಣೆ ಮಾಡಿಸಿ ಪುನಃ ಪ್ರತಿಷ್ಠಾಪಿಸಿದರು.

ಶ್ರೀ ಸತ್ಯನಿಧಿ ತೀರ್ಥರು ನಂಬಿದವರಿಗೆ ಸಂಪತ್ತು ಸುಖಗಳನ್ನು ಕೊಡುತ್ತಾ ಇಂದಿಗೂ ಬರುವ ಭಕ್ತರನ್ನು ಅನುಗ್ರಹಿಸುತ್ತಿದ್ದಾರೆ. ಅಲ್ಲಿ ಭಕ್ತರ ಬಾಯಲ್ಲಿ ಈ ಮಾತುಗಳನ್ನು ಕೇಳಬಹುದು.

ಭುವಿಯೊಳಗೆ ಶ್ರೀ ಸತ್ಯನಿಧಿತೀರ್ಥರಂತಹ ಯತಿಶ್ರೇಷ್ಠರಿಲ್ಲ

ಏಕಚಿತ್ತದಿಂದ ಶ್ರೀಗಳ ಚರಣಸೇವೆ ಮಾಡುವವರ ಪಾಲಿಗೆ ಕಾಮಧೇನು,

ಇಷ್ಟಾರ್ಥಿಗಳಿಗೆ ಕಲ್ಪವೃಕ್ಷ, ನೊಂದ ಮನಗಳಿಗೆ ರೋಗರುಜಿನ ಪರಿಹಾರಕ್ಕೆ ಇವರೊಬ್ಬರೇ ಗುರುಗಳು

ಶ್ರೀ ಸತ್ಯನಿಧಿಗಳು "ಶ್ರೀ ಸತ್ಯನಿಧಿ ಗುರೋ ಪಾಹಿ ಪಾಹಿ

**ಲೇಖನದ ಬಹುಭಾಗ ಫಣೀಂದ್ರ ಕೃಷ್ಣ ರಾವ್ ಅವರದ್ದು.**

**ಶ್ರೀ ಮಧ್ವೇಶಾರ್ಪಣಮಸ್ತು**